ಊರುಗಳಲ್ಲಿ ಒಳಚರಂಡಿ ಕಾಮಗಾರಿಗಳನ್ನು ಕೈಗೊಳ್ಳಲು ಯಾವುದೇ ತೊಂದರೆ ಬರುವುದಿಲ್ಲ. ಆದ್ದರಿಂದ ಇದರ ಬಗ್ಗೆ ಸರ್ಕಾರ ಪರಿಶೀಲಿಸುತ್ತದೆಯೇ?

ಶ್ರೀ ಬಿ. ಬಸವಲಿಂಗಪ್ಪ: ಇದರ ಬಗ್ಗೆ ನನ್ನ ಭಿನ್ನಾಭಿಪ್ರಾಯ ಇಲ್ಲವೇ ಇಲ್ಲ. ಮೊದಲಾಗಿ ಇಂಥಹ ಕಾರ್ಯಕ್ರಮವೇ ಇಲ್ಲ. ಆದರೆ ಅವರು ಇಂತಹ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸಲಹೆ ಮಾಡಿದ್ದರು.

ಶ್ರೀ ಎಸ್.ಹೆಚ್. ಕೌಜಲಗಿ : ಅಲ್ಲಿ ಹಣ ಇದೆ ಹಣಕಾಸಿನ ಪ್ರಾಬ್ಲಮ್ ಇಲ್ಲ ಆದ್ದರಿಂದ ಈ ಬಗ್ಗೆ ಒಂದು ಸ್ಕೀಮ್ ಹಾಕಬೇಕೆಂದು ಸಲಪೆ ಮಾಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ: ಆದರೆ ಇದು ಬೇರೆ ವಿಷಯ ಆಗುತ್ತದೆ.

ಹಾಸನ ಜಿಲ್ಲೆಯಲ್ಲಿ ರಸ್ತೆಗಳ ನಿರ್ಮಾಣ.

936 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯ ವಿಧಾನಸಭಾ ಕ್ಷೇತ್ರದಲ್ಲಿ 1983ರಿಂದ ಇಲ್ಲಿಯವರೆಗೆ ಹಾಸನ ಜಿಲ್ಲಾ ಪರಿಷತ್‌ನವರು ಪ್ರತಿ ವರ್ಷ ಎಷ್ಟು ಕಿ.ಮೀ. ಜಲ್ಲಿ ಹಾಕಿರುತ್ತಾರೆ ಹಾಗೂ ಎಷ್ಟು ಕಿ.ಮೀ. ಡಾಂಬರು ಹಾಕಿಸಿರುತ್ತಾರೆ?

ಆ) ರೋಜಗಾರ್ ಯೋಜನೆಯ ಅಂಗವಾಗಿ ರಸ್ತೆಗಳನ್ನು ನಿರ್ಮಿಸಲು ಯಾವ ಯಾವ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿವೆ. ಮತ್ತು ಎಷ್ಟು ಕಿ.ಮೀ. ರಸ್ತೆಗಳನ್ನು ನಿರ್ಮಾಣ ಮಾಡಿರುತ್ತಾರೆ. ಅದರಲ್ಲಿ ಜಲ್ಲಿ ರಸ್ತೆ ಮಾಡಿರುವ ಕಿ.ಮಿ. ಪ್ರತಿಯೊಂದು ಕ್ಷೇತ್ರದಲ್ಲಿ ಎಷ್ಟು ಉದ್ದದ ಜಲ್ಲಿ ರಸ್ತೆಯನ್ನು ನಿರ್ಮಿಸಲಾಗಿದೆ?

ಶ್ರೀ ಬಿ. ಬಸವಲಿಂಗಪ್ಪ, (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಪಶುಸಂಗೋಪನಾ ಸಚಿವರು):

ಅ) ಜಿಲ್ಲಾ ಪರಿಷತ್ತು 1987-88 ನೇ ಸಾಲಿನಲ್ಲಿ ಅಸ್ತಿತ್ವಕ್ಕೆ ಬಂದಿರುತ್ತದೆ. ಹಾಸನ ಜಿ.ಪ. ಅಸ್ತಿತ್ವಕ್ಕೆ ಬಂದ ಮೇಲೆ ವಿಧಾನಸಭಾ ಕ್ಷೇತ್ರವಾರು. ಜಲ್ಲಿ ಮತ್ತು ಡಾಂಬರು ರಸ್ತೆ ನಿರ್ಮಾಣ ಮಾಡಿರುವ ವರ್ಷವಾರು ಮಾಹಿತಿಯನ್ನು ಲಗತ್ತಿಸಿರುವ ತಃಖ್ತೆ 1ರಲ್ಲಿ ಕೊಟ್ಟಿರುತ್ತದೆ.

ಆ) ರೋಜಗಾರ್ ಯೋಜನೆಯು 1-4-89 ರಂದು ಜಾರಿಗೆ ಬಂದಿದ್ದು ಆ ಯೋಜನೆಯಡಿಯಲ್ಲಿ ನಿರ್ಮಾಣ ಮಾಡಿರುವ ಕ್ಷೇತ್ರಾವಾರು ರಸ್ತೆಯ ವಿವರ ಮತ್ತು ತಗಲಿರುವ ವೆಚ್ಚದ ವಿವರಗಳನ್ನು ಲಗತ್ತಿಸಿರುವ ತಃಖ್ತೆ 2 ರಲ್ಲಿ ಕೊಟ್ಟಿರುತ್ತದೆ.

ಕ್ರ. ಸಂ.	ವಿಧಾನ ಸಭಾ ಕ್ಷೇತ್ರ	ಜಲ್ಲಿ ರಸ್ತೆಗಳು (ಕಿ.ಮಿ.ಗಳಲ್ಲಿ)				ಡಾಂಬರು ರಸ್ತೆಗಳು (ಕಿ.ಮಿ.ಗಳಲ್ಲಿ)			
		87-88	88-89	89-90	90-91	87-88	88-89	89-90	90-91
1.	ಆಲೂರು	15.4	15.95	10.95	15.85	0.60	—	2.00	0.60
2.	ಸಕಲೇಶಪುರ	—	22.40	29.30	19.20	—	2.80	2.20	6.60
3.	ಅರಕಲಗೋಡು	67.70	16.70	16.00	17.00	17.00	1.00	2.00	3.00
4.	ಅರಸೀಕರೆ	5.60	5.30	11.70	9.70	9.70	1.60	0.30	1.70
5.	ಬೇಲೂರು	10.70	6.50	4.00	14.50	0.62	5.95	4.00	—

6.	ಶ್ರವಣಬೆಳಗೊಳ	3.00	12.00	8.50	8.80	4.50	8.50	1.00	—
7.	ಹಾಸನ	9.00	12.00	4.00	5.00	—	1.00	—	2.00
8.	ಹೊಳೆನರಸೀಪುರ	11.20	11.00	2.00	—	11.20	—	2.00	—
9.	ಗಂಡಸಿ	24.20	15.90	17.40	12.50	2.10	6.10	2.40	1.50
	ಒಟ್ಟು	146.80	117.75	103.65	102.55	21.62	34.45	15.90	15.40

1989-90 ಮತ್ತು 1990-91ನೇ ಸಾಲಿನ ಫೆಬ್ರುವರಿ 91 ರವರೆಗೆ
(ಲಕ್ಷ ರೂ.ಗಳಲ್ಲಿ) (ರಸ್ತೆ ಕಿ.ಮೀ.ಗಳಲ್ಲಿ)

ಕ್ರ. ಸಂ.	ವಿಧಾನಸಭಾ ಕ್ಷೇತ್ರ	ಒಟ್ಟು ಖರ್ಚು ಮಾಡಿದ ಅನುದಾನದ ವಿವರ	ಒಟ್ಟು ನಿರ್ಮಾಣವಾದ ರಸ್ತೆಯ ಉದ್ದ	ಜಿಲ್ಲಾ ರಸ್ತೆಯ ಉದ್ದ
1.	ಆಲೂರು - ಸಕಲೇಶಪುರ	19.955	304	—
2.	ಅರಕಲಗೂಡು	9.299	321	—
3.	ಅರಸೀಕರೆ	17.021	482	4
4.	ಗಂಡಸಿ	16.290	281	16
5.	ಹಾಸನ	15.706	273	6
6.	ಹೊಳೆನರಸೀಪುರ	8.586	221	—
7.	ಶ್ರವಣಬೆಳಗೊಳ	16.049	413	—
8.	ಬೇಲೂರು	15.398	426	13
	ಒಟ್ಟು	118.304	2721	39

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : 1990-91ನೇ ಸಾಲಿನಲ್ಲಿ 102-55 ಕಿ.ಮೀ. ಜಲ್ಲಿ ರಸ್ತೆ ಮಾಡಿದ್ದೇವೆ ಮತ್ತು 15-40 ಕಿ.ಮಿ. ಡಾಂಬರ್ ರಸ್ತೆ ಮಾಡಿದ್ದೇವೆಂದು ಹೇಳಿದ್ದೀರಿ ಈ ಜಿಲ್ಲೆಯ ಜಿಲ್ಲಾಪರಿಷತ್ತಿನ ಇಂಜಿನಿಯರಿಂಗ್ ವಿಭಾಗದಲ್ಲಿ ಎಷ್ಟು ಜನ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ಸ್ ಎಷ್ಟು ಜನ ಅಸಿಸ್ಟೆಂಟ್ ಇಂಜಿನಿಯರ್ಸ್ ಎಷ್ಟು ಜನ ಜ್ಯೂನಿಯರ್ ಇಂಜಿನಿಯರ್ಸ್ ಇದ್ದಾರೆ. ಇವರಿಗೆ ಇಷ್ಟು ಕೆಲಸ ಸಾಕಾಗುತ್ತದೆಯೇ? ಈ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ಏತಕ್ಕೆ ವಹಿಸಬಾರದು?

ಶ್ರೀ ಬಿ. ಬಸವಲಿಂಗಪ್ಪ: ಇದು ಬಹಳ ಒಳ್ಳೆಯ ಸಲಹೆ ನಾನು ಇದರ ಬಗ್ಗೆ ಒಂದು ಹೇಳಿಕೆ ಕೊಡಬೇಕಾಗುತ್ತದೆ. ಇದುವರೆಗಿನ ಲೆಕ್ಕದ ಪ್ರಕಾರ ಮಣ್ಣಿನ ರಸ್ತೆಗಳನ್ನು ಬಹಳ ಮಾಡುತ್ತಿದ್ದಾರೆ. ಮಣ್ಣಿನ ರಸ್ತೆ ಮಾಡುವುದರಿಂದ ದುರುಪಯೋಗವಾಗತಕ್ಕಂತಾದ್ದು ಬಹಳ ಇದೆ. ಆದ್ದರಿಂದ ಮುಂದಿನ ವರ್ಷಗಳಲ್ಲಿ ಅಸ್ಫಾಲ್ಟ್ ಮಾಡತಕ್ಕ ರಸ್ತೆಗಳನ್ನು, ಅಸ್ಫಾಲ್ಟ್ ರಸ್ತೆಗಳನ್ನಾಗಿಯೇ ಮಾಡಬೇಕೆಂದು ನಾನು ದೀರ್ಘವಾಗಿ ಯೋಚನೆ ಮಾಡಿದ್ದೇನೆ ಆದ್ದರಿಂದ ಮುಂದಿನ ವರ್ಷದಿಂದ ಮಣ್ಣಿನ ರಸ್ತೆಯ ಬದಲಾಗಿ ಅಸ್ಫಾಲ್ಟ್ ರಸ್ತೆ ಮಾಡುವುದನ್ನು ತಾವೆಲ್ಲರೂ ಒಪ್ಪುತ್ತೀರೆಂದು ನಾನು ತಿಳಿದುಕೊಂಡು ಇದನ್ನು ಹೇಳಲಿಕ್ಕೆ ನಾನು ಸಂತೋಷಪಡುತ್ತೇನೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ: ಬೇಲೂರು ಶ್ರವಣಬೆಳಗೊಳ ಮತ್ತು ಹೊಳೇನರಸಿಪುರ ಈ ಮೂರು ತಾಲ್ಲೂಕುಗಳಲ್ಲಿ ಡಾಂಬರ್ ರಸ್ತೆ ಒಂದು ಕಿಲೋಮೀಟರ್ ಕೂಡ ಮಂಜೂರು ಮಾಡಿಲ್ಲ. ಇದಕ್ಕೆ ಕಾರಣ ಏನು ಎಂದು ತಿಳಿಸಬೇಕು.

ಶ್ರೀ ಬಿ. ಬಸವಲಿಂಗಪ್ಪ: ಇದುವರೆಗಿನ ಕಾರಣ ನನಗೆ ಗೊತ್ತಿಲ್ಲ ಮುಂದಿನ ವರ್ಷಗಳಲ್ಲಿ ನಾವು ಸಾಕಷ್ಟು ರಸ್ತೆಗಳನ್ನು ತೆಗೆದುಕೊಂಡು ಅಸ್ಫಾಲ್ಟ್ ಮಾಡಬೇಕೆಂದು ಮಾಡಿದ್ದೇನೆ.

ಶ್ರೀ ಕೆ.ಹೆಚ್. ಹನುಮೇಗೌಡ: ಈ ಜಿಲ್ಲಾಪರಿಷತ್‌ನವರು ಜಲ್ಲಿ ಹಾಕುವುದು ಮತ್ತು ಟಾರ್ ಮಾಡುವ ಮಾಹಿತಿ ಏನು ಕೊಟ್ಟಿದ್ದಾರೆ ಇದರಲ್ಲಿ ಯಾವುದಾದರೂ ಕೊನೇ ಪಕ್ಷ ಎರಡು ಟಾರ್ ರಸ್ತೆಯನ್ನು ಮಾನ್ಯ ಸಚಿವರು ಪರಿಶೀಲನೆ ಮಾಡಿ ನೋಡಿಕೊಂಡು ಬಂದು ಅದು ಇದ್ದಾವೋ ಇಲ್ಲವೋ ಎಂದು ಅವರು ಈ ಸಭೆಗೆ ಹೇಳಿದರೆ, ನಾನು ತಮಗೆ ತುಂಬಾ ವಂದನೆಗಳನ್ನರ್ಪಿಸುತ್ತೇನೆ. ನನಗಂತೂ ಟಾರ್ ರಸ್ತೆಗಳು ಕಂಡಿಲ್ಲ ಮಾನ್ಯ ಮಂತ್ರಿಗಳು ಇದನ್ನು ಪರಿಶೀಲಿಸಿ ಅಲ್ಲಿ ಟಾರ್ ರಸ್ತೆ ಮಾಡಿದ್ದಾರೆಯೇ ಅಥವಾ ಇಲ್ಲವೇ ಎಂದು ನೋಡಿಕೊಂಡು ಬಂದು ಹೇಳಿದರೆ ಒಳ್ಳೆಯದೆಂದು ನನ್ನ ಸಲಹೆ.

ಶ್ರೀ ಹೆಚ್. ವಿಕಾಂತಯ್ಯ: ಮಾನ್ಯ ಮಂತ್ರಿಗಳು ನಿಮ್ಮ ಊರಿಗೆ ಹೋಗಿಬಂದಮೇಲೆ ನಮ್ಮ ಊರಿಗೆ ಬರಲಿ.

ಶ್ರೀ ಬಿ. ಬಸವಲಿಂಗಪ್ಪ: ಅಧ್ಯಕ್ಷರೆ ಮಾನ್ಯ ಸದಸ್ಯರು ಹೇಳಿದ ಪ್ರಕಾರ ನಾನು ಹೋಗುತ್ತೇನೆ.

ಶ್ರೀ ಗುರುದೇವ್: ಅಧ್ಯಕ್ಷರೇ ಇದೇ ವಿಚಾರದಲ್ಲಿ ಸಿ.ಓ.ಡಿ ಎನ್‌ಕ್ವೈರಿಗೆ ಆಜ್ಞೆ ಆಗಿತ್ತು ಮಾನ್ಯ ಮಂತ್ರಿಗಳು ಅದರ ಬಗ್ಗೆ ಏನಾಯಿತು ಎಂದು ಸಭೆಗೆ ತಿಳಿಸುತ್ತೇವೆಂದು ಹೇಳಿದ್ದರು ಇನ್ನೂ ಕೂಡ ತಿಳಿಸಿಲ್ಲ ದಯಮಾಡಿ ತಿಳಿಸಬೇಕು. ಮಾನ್ಯ ಹನುಮೇಗೌಡರು ಹೇಳಿದ ಹಾಗೆ ನಮ್ಮ ಹಾಸನ ಜಿಲ್ಲಾಪರಿಷತಿನಲ್ಲಿ ಅವ್ಯವಹಾರ ಬಹಳ ಜಾಸ್ತಿ ನಡೆಯುತ್ತಿದೆ. ಇದರ ಬಗ್ಗೆ ಈಗಾಗಲೇ ಸಿ.ಓ.ಡಿ.ಗೆ ಒಪ್ಪಿಸಿದ್ದಾರೆ. ಅದರ ಬಗ್ಗೆ ಏನಾಯಿತು, ಮಾನ್ಯ ಮಂತ್ರಿಗಳು ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ತಿಳಿಸಬೇಕು.

ಶ್ರೀ ಬಿ. ಬಸವಲಿಂಗಪ್ಪ: ಈ ಪ್ರಶ್ನೆಯಲ್ಲಿ ಅದು ಬರುವುದಿಲ್ಲ.

ಅಧ್ಯಕ್ಷರು: ಈ ಮೂಲಪ್ರಶ್ನೆಯಿಂದ ಈ ಉಪ ಪ್ರಶ್ನೆ ಉದ್ಭವಿಸುವುದಿಲ್ಲ.

ಕೃಷಿ ಸೇವಾ ಸಹಕಾರ ಸಂಘಗಳಿಗೆ ಅಧಿಕಾರೇತರ ಸದಸ್ಯರ ನಾಮ ನಿರ್ದೇಶನ

1607–ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವ್ಯವಸಾಯ ಸೇವಾ ಸಹಕಾರ ಸಂಘಗಳಿಗೆ ಅಧಿಕಾರೇತರ ಸದಸ್ಯರುಗಳನ್ನು ನಾಮಕರಣ ಮಾಡುವ ವಿಚಾರ ಸರ್ಕಾರದ ಮುಂದಿದೆಯೆ?

ಆ) ಇದ್ದಲ್ಲಿ ಯಾವಾಗ ನಾಮಕರಣ ಮಾಡಲಾಗುವುದು?

ಕೆ.ಹೆಚ್. ಪಾಟೀಲ್, (ಸಹಕಾರ ಸಚಿವರು) :

ಅ) ಇದೆ

ಆ) ಆಗ್ಗಿಂದಾಗ್ಗೆ ಮಾಡಲಾಗುತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಈ ರಾಜ್ಯದ ವ್ಯವಸಾಯ ಸಹಕಾರ ಸಂಘಗಳಿಗೆ ನಾಮಕರಣ ಮಾಡುತ್ತೇವೆಂದು ಹೇಳಿದ್ದಾರೆ. ನಾಮಕರಣವನ್ನು ಯಾವ ಆಧಾರದಮೇಲೆ ಮಾಡುತ್ತೀರೆಂದು ನಾನು ಮೊದಲನೇ ಉಪಪ್ರಶ್ನೆ ಕೇಳುತ್ತಿದ್ದೇನೆ. ಉದಾಹರಣೆಗೆ ಇದರಲ್ಲಿ ಹೆಣ್ಣುಮಕ್ಕಳಿಗೆ ರಿಸರ್ವೇಷನ್